# 'ರಾಜ್ಯದಲ್ಲಿರುವ ನಿಗಮಗಳಿಗೆ ಸರ್ಕಾರ ಆರ್ಥಿಕ ಶಕ್ತಿ ತುಂಬಲಿ'

**ಬೆಂಗಳೂರು:** ರಾಜ್ಯದಲ್ಲಿ ಹಾಲಿ ಇರುವ ನಿಗಮಗಳಿಗೆ ಆರ್ಥಿಕವಾಗಿ ಬಲ ತುಂಬಬೇಕು. ಸರ್ಕಾರ ಆ ನಿಟ್ಟಿನಲ್ಲಿ ಯೋಚಿಸಬೇಕು ಎಂದು ನಿಗಮಗಳ ಮಾಜಿ ಅಧ್ಯಕ್ಷರು ಅಭಿಪ್ರಾಯಪಡುತ್ತಾರೆ.

ಉದಯವಾಣಿಯಲ್ಲಿ ಶುಕ್ರವಾರ ಪ್ರಕಟವಾಗಿದ್ದ ವರದಿಗೆ ಪ್ರತಿಕ್ರಿಯಿಸಿದ ಮಾಜಿ ಅಧ್ಯಕ್ಷರುಗಳು, ಬಿಜೆಪಿ ಸರ್ಕಾರದ ಬಂದ ನಂತರ ನಿಗಮಗಳಿಗೆ ಅನುದಾನ ಕಡಿತ ಮಾಡಿದೆ. ಯಾವ ನಿಗಮಕ್ಕೂ ಅಗತ್ಯವಾದ ಹಣ ಬಿಡುಗಡೆ ಮಾಡಿಲ್ಲ, ಹಿಂದಿನ ವರ್ಷಗಳಿಗೆ ಹೋಲಿಸಿದರೆ ಶೇ.50 ರಿಂದ 80 ರಷ್ಟು ಕಡಿತವಾಗಿದೆ ಎಂದು ಹೇಳುತ್ತಾರೆ.

ಡಾ.ಬಿ.ಆರ್.ಅಂಬೇಡ್ಕರ್ ನಿಗಮಕ್ಕೆ ಸಿದ್ದರಾಮಯ್ಯ ಅವರ ಅವಧಿಯಲ್ಲಿ 350 ಕೋಟಿ ರೂ. ವಾರ್ಷಿಕವಾಗಿ ಬಿಡುಗಡೆ ಮಾಡಲಾಗುತ್ತಿತ್ತು. ಇದೀಗ 100 ಕೋಟಿ ರೂ. ಸಹ ಈ ವರ್ಷ ಬಿಡುಗಡೆ ಮಾಡಿಲ್ಲ ಎಂದು ಡಾ.ಬಿ.ಆರ್.ಅಂಬೇಡ್ಕರ್ ನಿಗಮದ ಮಾಜಿ ಅಧ್ಯಕ್ಷ ಹಾಗೂ ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಹೇಳುತ್ತಾರೆ.


ಹಳೇ ನಿಗಮಗಳಿಗೆ ಸಿಕ್ಕಿಲ್ಲ ವಾರಸುದಾರ; ಹೊಸದಕ್ಕೆ ಯಾರು ಜವಾಬ್ದಾರ?

ಉದಯವಾಣಿಯಲ್ಲಿ ಶುಕ್ರವಾರ ಪ್ರಕಟವಾಗಿದ್ದ ವರದಿ.

ನಿಗಮ ಸ್ಥಾಪಿಸುವುದರಿಂದ ಜಾತಿಗಳ ಅಭಿವೃದ್ಧಿ ಆಗುವುದಿಲ್ಲ, ಇಲಾಖೆಗಳಿಂದಲೇ ಪರಿಣಾಮಕಾರಿ ಕಾರ್ಯಕ್ರಮ ರೂಪಿಸಿದರೆ ಸಾಕು ಎಂದು ತಿಳಿಸುತ್ತಾರೆ.

ರಾಜ್ಯ ಸರ್ಕಾರ ನಿಗಮಗಳನ್ನು ಸ್ಥಾಪನೆ ಮಾಡಿ ಅವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳದಿದ್ದರೆ, ಅವು ಸರ್ಕಾರಕ್ಕೆ ಹೊರೆಯಾಗುತ್ತವೆ. ಕವಿಕಾದಲ್ಲಿ ಪ್ರತಿ ತಿಂಗಳು ಸುಮಾರು ಒಂದೂವರೆ ಸಾವಿರ ಟ್ರಾನ್ಸ್‌ಫಾರ್ಮರ್ ಉತ್ಪಾದನೆ ಮಾಡಲಾಗುತ್ತದೆ. ಅವುಗಳನ್ನು ಎಸ್ಕಾಂಗಳು ಕಡ್ಡಾಯವಾಗಿ ಖರೀದಿ ಮಾಡದೇ ಖಾಸಗಿಯವರಿಂದ ಖರೀದಿಸಿದರೆ, ಕವಿಕಾ ನಷ್ಟ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಸರ್ಕಾರ ನಿಗಮಗಳ ರಚನೆಗೆ ಆದ್ಯತೆ ನೀಡುವ ಬದಲು ಇರುವ ನಿಗಮಗಳನ್ನು ಸಮರ್ಪಕವಾಗಿ ಬಳಸಿಕೊಂಡು ಲಾಭದಾಯವಾಗಿ ಮಾಡುವುದು ಮುಖ್ಯ ಎಂದು ಕವಿಕಾ ಮಾಜಿ ಅಧ್ಯಕ್ಷ ಎಸ್.ಮನೋಹರ್ ಹೇಳುತ್ತಾರೆ. ಸರ್ಕಾರಕ್ಕೆ ಆದಾಯ ತರುವ ನಿಗಮಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು. ಅರಣ್ಯ ಕೈಗಾರಿಕಾ ನಿಗಮ ಸರಿಯಾಗಿ ಕಾರ್ಯ ನಿರ್ವಹಿಸಿದರೆ ಲಾಭದಲ್ಲಿ ನಡೆಸಬಹುದು. ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಲಾಭದಾಯಕ ಮಾಡಿ ಸುಮಾರು 1 ಕೋಟಿ ರೂ. ಮುಖ್ಯಮಂತ್ರಿ ಪರಿಹಾರ ನಿಧಿಗೆ ನೀಡಲಾಗಿತ್ತು. ಅಧಿಕಾರ ನಡೆಸುವವರ ಇಚ್ಛಾಶಕ್ತಿಯ ಮೇಲೆ ನಿಗಮಗಳ ಲಾಭ ನಷ್ಟ ನಿರ್ಧಾರವಾಗುತ್ತವೆ ಎಂದು ಅರಣ್ಯ ಕೈಗಾರಿಕಾ ನಿಗಮ ಮಾಜಿ ಅಧ್ಯಕ್ಷ ಈ.ಸುಧೀಂದ್ರ ತಿಳಿಸುತ್ತಾರೆ.